## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಬಿ.ನರಸಿಂಹ, ಬಿನ್ ಗೋವಿಂದ, ಹಿಂದಿನ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧದ ಶಿಸ್ತು ನಡವಳಿ – ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಂ.ಗ್ರಾಅಪ:670:ಗ್ರಾಪಂಕಾ:2012, ದಿನಾಂಕ:01.01.2013.
2. ಅಪರ ನಿಬಂಧಕರು, ವಿಚಾರಣೆಗಳು-08, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖೆ: LOK/ARE-08/14-A/ENQ-25/2013, ದಿನಾಂಕ:19.02.2015.
3. ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಶಿಫಾರಸ್ಸು ಸಂಖ್ಯೆ: LOK/ARE-08/ENQ-25/2013, ದಿನಾಂಕ:02.03.2015.
4. ಸರ್ಕಾರದ ಕಾರಣ ಕೇಳುವ ನೋಟಿಸ್ಸು ಸಂಖ್ಯೆ:ಗ್ರಾಅಪ:670:ಗ್ರಾಪಂಕಾ:2012, ದಿನಾಂಕ:10.06.2015.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:670:ಗ್ರಾಪಂಕಾ:2012(ಭಾಗ-1) ದಿನಾಂಕ:24.09.2015.
6. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 8072/2015ರಲ್ಲಿ ನೀಡಿದ ಆದೇಶ ದಿನಾಂಕ: 23.08.2016.
7. ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ: ಗ್ರಾಅಪ 92 ಗ್ರಾಪಂಸಿ 2016 ದಿನಾಂಕ 17.10.2016.
8. ಸರ್ಕಾರದ ವಿಚಾರಣಾ ತಿಳುವಳಿಕೆ ಪತ್ರ ಸಂಖ್ಯೆ: ಗ್ರಾಅಪ 92 ಗ್ರಾಪಂಸಿ 2015, ದಿನಾಂಕ 13.07.2017.
9. ಆಪಾದಿತ ನೌಕರನಾದ ಶ್ರೀ ಬಿ.ನರಸಿಂಹ, ಬಿನ್ ಗೋವಿಂದ, ಹಿಂದಿನ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ರವರು ದಿನಾಂಕ:24-07-2017ರಂದು ನೀಡಿರುವ ಲಿಖಿತ ಹೇಳಿಕೆ.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀ ಬಿ.ನರಸಿಂಹ, ಗ್ರಾಮ ಪಂಚಾಯತಿ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿಯಲ್ಲಿ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಲಂಚದ ಹಣ ಸ್ವೀಕರಿಸುವಾಗ ದಿನಾಂಕ:05.08.2010 ರಂದು ಲೋಕಾಯುಕ್ತ ಪೋಲಿಸರ ಬಲೆಗೆ ಸಿಕ್ಕಿ ಬಿದ್ದಿದ್ದು, ಅದರಂತೆ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಅಪರ ನಿಬಂಧಕರು, ವಿಚಾರಣೆ-8 ರವರು ವಿಚಾರಣಾ ವರದಿಯನ್ನು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿ ಮಾನ್ಯ ಉಪಲೋಕಾಯುಕ್ತರು, ಸದರಿ ವಿಚಾರಣಾ ವರದಿಯ ಆಧಾರದ ಮೇಲೆ ಆಪಾದಿತ ಸದಸ್ಯರ ಆರೋಪವು ಸಾಬೀತಾಗಿದ್ದು, ಆಪಾದಿತ ನೌಕರನ ಮೇಲಿನ ಆರೋಪದ ತೀವ್ರತೆಗೆ ಅನುಗುಣವಾಗಿ ಆಪಾದಿತ ನೌಕರನಾದ ಶ್ರೀ ಬಿ.ನರಸಿಂಹ, ಬಿನ್ ಗೋವಿಂದ, ಹಿಂದಿನ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ, ರವರನ್ನು ಸೇವೆಯಿಂದ ವಜಾಗೊಳಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರಲ್ಲಿ ಆಪಾದಿತ ನೌಕರನಾದ ಶ್ರೀ ಬಿ.ನರಸಿಂಹ, ರವರಿಗೆ ಸರ್ಕಾರದಿಂದ ಕಾರಣ ಕೇಳುವ ನೋಟೀಸ್ಸು ಜಾರಿಮಾಡಿದ್ದು ಸದರಿ ಕಾರಣ ಕೇಳುವ ನೋಟೀಸಿಗೆ ಆಪಾದಿತ ನೌಕರನು ನಿಗದಿತ ಸಮಯದಲ್ಲಿ ಲಿಖಿತ ಹೇಳಿಕೆ ಸಲ್ಲಿಸಿರಲಿಲ್ಲ.

ಈ ಹಿನ್ನೆಲೆಯಲ್ಲಿ ಸರ್ಕಾರವು ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಸದರಿ ವಿಚಾರಣಾ ವರದಿ ಮತ್ತು ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ ಬಿ.ನರಸಿಂಹ, ಬಿನ್ ಗೋವಿಂದ, ಹಿಂದಿನ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ರವರನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(viii) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ "ಸೇವೆಯಿಂದ ವಜಾಗೊಳಿಸುವ" ದಂಡನೆ ವಿಧಿಸಿ ಆದೇಶಿಸಲಾಗಿತ್ತು.

ಈ ಆದೇಶದ ವಿರುದ್ಧ ಶ್ರಿ. ಬಿ.ನರಸಿಂಹ ರವರು ಮಾನ್ಯ ಕೆ.ಎ.ಟಿ ಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ 8072/2015ರಲ್ಲಿ ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಆದೇಶದಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

- The impugned order bearing No. ಗ್ರಾಅಪ 670 ಗ್ರಾಪಂಕಾ 2012 (ಭಾಗ-1) dated 24.09.2015 (Annexure A7) is quashed. However, the applicant is not entitled for reinstatement or backwages at this stage.
- The 1st respondent, within one month from now, shall supply copies of the Inquiry Officer's report and recommendation of the Upalokayukta to the applicant seeking his reply;
- The applicant shall submit his reply to the 1st respondent within one month from the date of receipt the copies of the above documents; and
- One receipt of the reply from the applicant, the 1st respondent shall pass an appropriate order as per law within two months ಎಂದು ಆದೇಶ ನೀಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (7)ರಲ್ಲಿ ಆಪಾದಿತ ನೌಕರನಾದ ಶ್ರೀ ಬಿ.ನರಸಿಂಹ, ರವರಿಗೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಆದೇಶದಂತೆ ಎರಡನೇ ಕಾರಣ ಕೇಳುವ ನೋಟಿಸ್‌ನೊಂದಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯನ್ನು ಜಾರಿ ಮಾಡಿ ಸದರಿ ನೋಟೀಸಿಗೆ ಅವರ ಲಿಖಿತ ಹೇಳಿಕೆ ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (9)ರಲ್ಲಿ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ತಿಳಿಸಿರುತ್ತಾರೆ.

- ತಮ್ಮ ಲಿಖಿತ ಹೇಳಿಕೆಯಲ್ಲಿ ತಾವು ಯಾವುದೇ ಲಂಚ ಸ್ವೀಕರಿಸಿರುವುದಿಲ್ಲ ತಾವು ಕೆಲಸ ನಿರ್ವಹಿಸುತ್ತಿರುವಾಗ ಉದ್ಯಮ ಪರವಾನಿಗೆ ಬಾಬ್ತು 300/- ರೂ ನೀಡಿ ಶೇಕ್ ಫಿರೋಜ್ ಸಾಹೇಬ್ ಎನ್ನುವವರು ರಾಜಕೀಯ ಪ್ರಭಾವಿ ವ್ಯಕ್ತಿಯ ಮೂಲಕ ಸುಳ್ಳು ಕೇಸ್ ಲೋಕಾಯುಕ್ತಕ್ಕೆ ನೀಡಿ ಟ್ರ್ಯಾಪ್ ಮಾಡಿರುತ್ತಾರೆ. ಸದರಿ ಪ್ರಕರಣದಲ್ಲಿ ಜಿಲ್ಲಾ ಸೆಶನ್ಸ್ ನ್ಯಾಯಲಯದಲ್ಲಿ ಎಸ್.ಸಿ.ನಂ.03/2012 ರಲ್ಲಿ ನನ್ನನ್ನು ದೋಷಮುಕ್ತನನ್ನಾಗಿ ಮಾಡಿ ಆದೇಶ ನೀಡಿರುತ್ತದೆ. ಕಡುಬಡವ ಹಾಗೂ ಪರಿಶಿಷ್ಟ ಜಾತಿಯವನಾದ ನನ್ನ ಮೇಲೆ ಕರುಣೆ ತೋರಿ ನನ್ನನ್ನು ಮರು ನೇಮಕ ಮಾಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (8) ರಲ್ಲಿ ಆಪಾದಿತ ನೌಕರನಾದ ಶ್ರೀ ಬಿ.ನರಸಿಂಹ, ರವರಿಗೆ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ತಿಳುವಳಿಕೆ ಪತ್ರ ಹೊರಡಿಸಲಾಗಿದ್ದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇವರ ಸಮಕ್ಷಮ ಮೌಖಿಕ ವಿಚಾರಣೆ ನಡೆಸಲಾಗಿರುತ್ತದೆ.

ಶ್ರೀ ಬಿ.ನರಸಿಂಹ, ಇವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದ ಸರ್ಕಾರವು ಈ ಪ್ರಕರಣದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿನ ಆದೇಶವನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯಾಮಂಡಳಿಯು ರದ್ದುಪಡಿಸಿರುವುದರಿಂದ ಹಾಗೂ ಕರ್ನಾಟಕ ಆಡಳಿತ ನ್ಯಾಯಾಮಂಡಳಿಯ ಆದೇಶದಂತೆ ಆಪಾದಿತ ನೌಕರರು ನೀಡಿರುವ ಲಿಖಿತ ಹೇಳಿಕೆಯನ್ನು ಪರಿಗಣಿಸಿ ಆಪಾದಿತ ನೌಕರರಾದ ಶ್ರೀ ಬಿ.ನರಸಿಂಹ, ಬಿನ್ ಗೋವಿಂದ, ಹಿಂದಿನ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆರವರು ಪ್ರಸ್ತುತ ಹೊಂದಿರುವ ಹುದ್ದೆಯಿಂದ ಕೆಳಗಿನ ಹುದ್ದೆಗೆ ಇಳಿಸುವ ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/92/ಗ್ರಾಪಂಪಿ/2015**
**ಬೆಂಗಳೂರು, ದಿನಾಂಕ:-08-03-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿ.ನರಸಿಂಹ, ಬಿನ್ ಗೋವಿಂದ, ಹಿಂದಿನ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ, ರವರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:670:ಗ್ರಾಪಂಕಾ:2012(ಭಾಗ-1) ದಿನಾಂಕ:24.09.2015. ರಲ್ಲಿ ವಿಧಿಸಿದ ಸೇವೆಯಿಂದ ವಜಾಗೊಳಿಸಿದ ದಂಡನೆಯ ಆದೇಶವನ್ನು ಹಿಂಪಡೆದು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(v) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಅವರು ಪ್ರಸ್ತುತ ಹೊಂದಿರುವ ಹುದ್ದೆಯಿಂದ ಕೆಳಗಿನ ಹುದ್ದೆಗೆ ಇಳಿಸುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:-**

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-08, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
6. ಶ್ರೀ ಬಿ.ನರಸಿಂಹ, ಬಿನ್ ಗೋವಿಂದ, ಹಿಂದಿನ ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ,
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.